ವರ್ಷ ಕಳೆದಂತೆ ಸಣ್ಣ ಮರ ಬಹು ಬೇಗ ದೊಡ್ಡದಾಯಿತು. ಈಗ ನಾಗರಾಜ, ಕೇಶವ ಮರದ ಅಡಿಕೆ ಇಳುವರಿ ಆ ಭಾಗದಲ್ಲಿ ಕಡಿಮೆ ಆಗಲು ಅಕ್ಕಾರ ಮರವೇ ಕಾರಣ ಎಂದು ದೂರುವುದು ಹೆಚ್ಚಾಯಿತು. ಇಳುವರಿ ಕಡಿಮೆಯಾಗುತ್ತದೆ ಎಂಬ ವಿಷಯವನ್ನು ಯಾವ ಕೃಷಿಕ ತಾನೇ ಒಪ್ಪುತ್ತಾನೆ? ನಮ್ಮ ಯಜಮಾನರಿಗೂ ಆ ಮರ ಒಂದು ಉಪದ್ರ ಎನಿಸಲು ಶುರುವಾಯಿತು. ಒಂದು ದಿನ ತೋಟಕ್ಕೆ ಹೋದಾಗ ನನ್ನನ್ನು ಆ ಮರದ ಬಳಿ ಕರೆದುಕೊಂಡು ಹೋಗಿ ಸುತ್ತಮುತ್ತ ಇರುವ ಅಡಿಕೆ ಮರದಲ್ಲಿ ಒಂದು ಚೂರೂ ಅಡಿಕೆ ಹಿಡಿಯದ್ದನ್ನು ತೋರಿಸಿ ಮರ ಕಡಿಯಬೇಕಾದ ಅನಿವಾರ್ಯತೆ ಮನವರಿಕೆ ಮಾಡಲು ಪ್ರಯತ್ನಿಸಿದರು. ನನಗೂ ಅರ್ಥ ಆಗಿತ್ತು.

ಯೋಚನೆ ಮಾಡಿ ಹೇಳಿದೆ, ‘ನೋಡಿ ಈ ಮರದಿಂದ ತೀರಾ ತೊಂದರೆ ಆಗುತ್ತಿದ್ದರೆ ತೆಗೆಯುವುದು ಸರಿ. ಆದರೆ ಒಂದು ಷರತ್ತು; ಇದೇ ಮರದ ಹತ್ತು ಸಸಿ ನೀವು ಮಾಡಿಕೊಡಬೇಕು. ಚಿಕ್ಕದಲ್ಲ, ದೊಡ್ಡದು ಮಾಡಬೇಕು’ ಅಂತ. ಸಾಮಾನ್ಯವಾಗಿ ನಾನು ಯಜಮಾನರಿಗೆ ವಿಧಿಸುವ ಷರತ್ತು, ಬೇಡಿಕೆಗಳು ಸುಲಭ ಸಾಧ್ಯವಾಗಿರುವುದಿಲ್ಲ. ಅವರಿಗೆ ಅನೇಕ ಸಲ ಯಾವುದಾದರೂ ಅಂಗಡಿಯಲ್ಲಿ ಸಿಗುವ ವಸ್ತುಗಳನ್ನು ಇವಳು ಬೇಡಿಕೆ ಇರಿಸಿದ್ದರೆ ಸುಖವಾಗಿತ್ತು ಅನ್ನಿಸುವುದಿದೆ. ಆದರೆ ದುಡ್ಡಿನಿಂದ ದೊರಕುವ ವಸ್ತುಗಳು ಮೌಲ್ಯಯುತ ಅಂತ ನನಗೆ ಅನ್ನಿಸುವುದು ಕಡಿಮೆ. ಇದೇ ಕಾರಣಕ್ಕೆ, ಹೆಚ್ಚು ದುಡ್ಡು ಕೊಟ್ಟರೆ ಸುಲಭ ದರ್ಶನ ನೀಡುವ ಪುಣ್ಯಸ್ಥಳಗಳು ಕೂಡ ನನಗೆ ಪ್ರಶ್ನಾರ್ಥಕವಾಗಿವೆ. ಅದಿರಲಿ, ಈ ಸಲದ ನನ್ನ ಬೇಡಿಕೆ ತೀರಾ ಸುಲಭ ಎಂಬಂತೆ ಯಜಮಾನರಿಗೆ ಕಂಡು ‘ಆಗಲಿ’ ಎಂದು ನಾಗರಾಜನಿಗೆ ‘ನೋಡಪ್ಪಾ, ನಿಮ್ಮ ಅಕ್ಕಾರಿಗೆ ಹತ್ತು ಸಸಿ ಮಾಡಿಕೊಡೋಣ. ಆಮೇಲೆ ನೋಡೋಣವಂತೆ’ ಎಂದರು.

ಸಮಸ್ಯೆ ಈಗ ಶುರುವಾಯಿತು. ಅತ್ತಿಯ ಹಣ್ಣಿನಂತೆ ಹಣ್ಣು ಬಿಡುತ್ತಿದ್ದ ಆ ಮರದ ಹಣ್ಣಿನೊಳಗೆ ಬೀಜ ಕಾಣುತ್ತಿರಲಿಲ್ಲ. ಒಂದಷ್ಟು ಕೊಂಬೆ ಕಡಿದು ನೆಟ್ಟರೂ ಚಿಗುರಲಿಲ್ಲ. ಯಾವುದೇ ಅರಣ್ಯ ಇಲಾಖೆಯ ನರ್ಸರಿಯಲ್ಲಿ ನೀರುವಾಟೆಯ ಸಸಿ ಬೆಳೆಸಿಲ್ಲ. ಹಾಗಂತ ಸುಮ್ಮನೆ ಇದ್ದರಾಯಿತೇ? ಷರತ್ತು ಯಜಮಾನರ ಮುಂದೆ ಇಟ್ಟದ್ದು ಬೀಸುವ ದೊಣ್ಣೆಯಿಂದ ತಪ್ಪಿಸಲಷ್ಟೇ. ಮರದ ಆಯಸ್ಸು, ಸಂತಾನೋತ್ಪತ್ತಿಯ ಭಾರ ನನ್ನ ಹೆಗಲ ಮೇಲೆ ಏರಿಸಿಕೊಂಡಾಗಿತ್ತು. ಸರ್ಕಾರ ಬೆಳೆಸದಿದ್ದರೇನಂತೆ ಪ್ರಕೃತಿ ನಮ್ಮ ಕೈಬಿಟ್ಟೀತೇ? ಕೆಲವು ದಿನಗಳ ನಂತರ ಹಣ್ಣು ತಿಂದ ಯಾವುದೋ ಹಕ್ಕಿಯ ಹಿಕ್ಕೆಯಿಂದ ಹುಟ್ಟಿದ ನಾಲ್ಕು ಸಸಿಗಳು ಮರದ ಕೆಳಗೆ ಕಂಡವು. ತೀರಾ ಎಳಸಾಗಿದ್ದರೂ, ದೊಡ್ಡದಾಗಲೆಂದು ಕಾದರೆ ಕಳೆ ಮೆಶೀನಿನ ಬಾಯಿಗೆ ತುತ್ತಾಗಬಹುದೆಂದು ಕೂಡಲೇ ಜೋಪಾನವಾಗಿ ಮಣ್ಣಿನ ಸಮೇತ ಕಿತ್ತು ಪಾಕೀಟಿಗೆ ಹಾಕಿ ಬೆಂಗಳೂರಿಗೆ ತಂದಿಟ್ಟೆ. ರಾತ್ರಿ ತಂದಿಟ್ಟ ಸಣ್ಣ ಸಸಿಗಳು ಬೆಳಕು ಹರಿಯುವುದರೊಳಗೆ ನಮ್ಮ ನಾಯಿಗಳ ಚಿನ್ನಾಟಕ್ಕೆ ಸಿಲುಕಿ, ಗಿಡ ಎಲ್ಲಿದೆ ಎಂದು ಗುರುತಿಸಲಾಗದಂತೆ ಹರಿದು, ತುಳಿದು ಮಣ್ಣು ಮುದ್ದೆಯೊಳಗೆ ಸೇರಿತ್ತು. ಆ ಮುದ್ದೆಯನ್ನೇ ನಿಧಾನವಾಗಿ ಹುಡುಕಿ ಕೈಗೆ ಸಿಕ್ಕ ನಾಲ್ಕು ಬೇರು ಬಿಡಿಸಿ ತೆಗೆದು ಪುನಃ ಪಾಕೀಟಲ್ಲಿ ನೆಟ್ಟೆ. ಪ್ರಯತ್ನ ಫಲ ನೀಡಿತು! ಎರಡು ಸಸಿಗಳು ಚಿಗುರೊಡೆದವು.



ನೀರೊಟ್ಟೆ ಮರ ಮದ್ದಾಲೆಯಷ್ಟು ಎತ್ತರವಲ್ಲದಿದ್ದರೂ ನೂರು ಅಡಿಗೂ ಮೀರಿ ಬೆಳೆಯಬಲ್ಲ ನಿತ್ಯ ಹರಿದ್ವರ್ಣದ ಮರ. ನೇರವಾಗಿ ಬೆಳೆಯುತ್ತದೆ. ವೇಗವಾಗಿ ಬೆಳೆಯುವ ಗುಣದಿಂದ ನಾಟಾ ಮಿದು. ಸಸಿಯಾಗಿದ್ದಾಗ ಎಲೆಗಳು ಉದ್ದವಾಗಿ ಇದ್ದು, ಮರವಾದಾಗ ಅಂಡಾಕಾರವಾಗಿರುತ್ತದೆ. ಎಲೆ ಕಿತ್ತರೆ ಹಾಲು ಒಸರುತ್ತದೆ. ಯಾವುದಕ್ಕೂ ಬಳಸುವುದಿಲ್ಲ ಎನ್ನುವುದಕ್ಕಿಂತ ಮರವೇ ಇಲ್ಲ ಎಂದರೆ ಸರಿ. ಗಮನಕ್ಕೂ ಬರುವ ಮೊದಲೇ ನಶಿಸಿ ಹೋಗುತ್ತಿರುವ ಸಂತತಿಗಳಲ್ಲಿ ಇದೂ ಒಂದು. ದಕ್ಷಿಣ ಏಷ್ಯಾದ ಬಹುತೇಕ ದೇಶಗಳಲ್ಲಿ ಬೆಳೆಯುತ್ತದಂತೆ. ನಾನಂತೂ ನಮ್ಮ ತೋಟದಲ್ಲಿ ಹೊರತುಪಡಿಸಿ ಬೇರೆ ಎಲ್ಲೂ ಒಂದೇ ಒಂದು ನೀರೊಟ್ಟೆ ಮರವನ್ನು ನೋಡಿಲ್ಲ. ಅಂತರರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟ (IUCN) ಇದರ ಸಂರಕ್ಷಣಾ ಸ್ಥಿತಿಗತಿಯ ಮಾಪನವನ್ನು ಇತ್ತೀಚಿನವರೆಗೂ ಮಾಡಲು ಹೋಗಿಲ್ಲ.

ಹಿಂದೊಮ್ಮೆ ಮರಗಳ ಕಥೆಯಲ್ಲಿ ಹೇಳಿದ, ಯಾವುದಕ್ಕೂ ಬಳಕೆಯಾಗದ ಪಿಳಲಿಮರ ನಮ್ಮ ಊರಿನ ಪಕ್ಕದ ಚಿಕ್ಕಾವಲಿ ಹಾಗೂ ಜಡೆ ಊರಿನಲ್ಲಿ ಎಕರೆಗಟ್ಟಲೆ ಹಬ್ಬಿದ್ದರೂ, ಆ ಜಾಗದ ಮಾಲೀಕರಾದ ಸಣ್ಣ ರೈತರು ಒಂದು ಸಣ್ಣ ಹರೆಯನ್ನೂ ಕಡಿಯದೆ ಉಳಿಸಿಕೊಳ್ಳುವ ವೈಶಾಲ್ಯ ಮೆರೆದಿರುವಾಗ ನಮ್ಮ ಅಡಿಕೆ ತೋಟದ ಮಧ್ಯೆ ಇರುವ ನೀರೊಟ್ಟೆ ಮರವನ್ನು ಉಳಿಸಿಕೊಳ್ಳುವುದು ದೊಡ್ಡದೇನಲ್ಲ ಎಂದು ನಮಗೂ ಈಗ ಮನವರಿಕೆ ಆಗಿದೆ.

ಅಡಿಕೆ ಇಳುವರಿಯಷ್ಟೇ ಕಾಡು ಜಾತಿಯ ಇರುವೂ ಮುಖ್ಯ ಎಂದು ನಾಗರಾಜ, ಕೇಶವ ಅರಿತಿರಬೇಕು, ದೂರುವುದು ನಿಂತಿದೆ. ನೆಟ್ಟ ಎರಡು ವರ್ಷದಲ್ಲಿ ಆಳೆತ್ತರ ಮೀರಿ ಬೆಳೆದ ನೀರೊಟ್ಟೆ ಸಸಿಗಳೊಡನೆ ಮೊದಲೇ ಇದ್ದ ನೀರೊಟ್ಟೆ ಮರವು ಅರವತ್ತು ಅಡಿಗೂ ಮಿಕ್ಕಿ ಬೆಳೆದು ಮುಗಿಲ ಮುಟ್ಟುವ ಪೈಪೋಟಿಯಲ್ಲಿದೆ. ನಮ್ಮ ದೇಶದಾದ್ಯಂತ ಮರಗಳಿಗಾಗಿ, ಅನ್ನ ನೀಡುವ ತಮ್ಮ ಜಮೀನನ್ನೇ ಬಿಟ್ಟುಕೊಟ್ಟ ರೈತರಿದ್ದಾರೆ. ಅವರ ಹೃದಯ ವೈಶಾಲ್ಯ ನಿಲುಕಲು ನಾವೂ ಪೈಪೋಟಿಗಿಳಿಯಬೇಕಿದೆ.

**ಪ್ರತಿಕ್ರಿಯಿಸಿ: feedback@sudha.co.in**